ಇ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡದ ಉಪವಿಧಿಗಳು, ವಸತಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಸಂಬಂಧಿ ದಂತೆ ಉಪವಿಧಿಗಳು ಒಂದೇ ತೆರನಾಗಿಲ್ಲವೇ?*

ಈ) *ಸರ್ಕಾರವು ಬೆಂಗಳೂರು ನಗರದಲ್ಲಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣಕ್ಕೆ ಸಂಬಂಧಿ ದಂತೆ ಉಪವಿಧಿಗಳ ಪರಿಷ್ಕರಣೆಗಾಗಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮತ್ತ ಶಾಸಕರನ್ನು ಸದಸ್ಯರನ್ನಾಗಿ ಒಂದು ಸಮಿತಿಯನ್ನು ರಚಿಸುವುದೇ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಹೌದು.

ಇ) ಹೌದು.

ಈ) ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯನ್ವಯ ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡ ಬೈಲಾಗಳನ್ನು ರಚಿಸಿ ಸರ್ಕಾರದ ಮಂಜೂರಾತಿ ಪಡೆಯಬೇಕಾಗುತ್ತದೆ.

ಮಂಗಳೂರಿನ ಕಿಂಗ್ ಪಾರ್ಕಿನಲ್ಲಿ ಅಬಕಾರಿ ಇಲಾಖೆಯ ಕಛೇರಿ ಕಟ್ಟಡ ನಿರ್ಮಾಣ

215 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸೂರತ್ಕಲ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮಂಗಳೂರಿನ ಕಿಂಗ್ ಪಾರ್ಕಿನಲ್ಲಿ (ಮೇರಿ ಹಿಲ್‌ನಲ್ಲಿ) ಕಟ್ಟಿಸಿರುವ ಅಬಕಾರಿ ಇಲಾಖೆಯ ಕಛೇರಿ ಕಟ್ಟಡದ ಖರ್ಚು ಎಷ್ಟು?*

2) *ಈಗ ಅಬಕಾರಿ ಕಛೇರಿಗಳು ಇರುವ ಕಟ್ಟಡಗಳಿಗೆ ತಿಂಗಳಿಗೆ ಕೊಡುವ ಬಾಡಿಗೆ ಎಷ್ಟು?*

3) *ಹೊಸ ಕಟ್ಟಡಕ್ಕೆ ಕಛೇರಿಗಳು ಸ್ಥಳಾಂತರಗೊಳ್ಳದೆ ಇರುವುದಕ್ಕೆ ಕಾರಣಗಳೇನು?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

1) ರೂ. 18,55,210-00.

2) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಮಾಹೆಯಾನ ಬಾಡಿಗೆ ರೂ. 22,397-00

3) ಹೊಸ ಕಟ್ಟಡದಲ್ಲಿನ ಸ್ಥಳಾವಕಾಶವು, ಸಾಲದು, ಮೂಲಭೂತ ಅಗತ್ಯಗಳಾದ ನೀರು, ವಿದ್ಯುಚ್ಛಕ್ತಿ ಮತ್ತು ನೈರ್ಮಲ್ಯದ ವ್ಯವಸ್ಥೆಗಳನ್ನು ಇನ್ನೂ ಒದಗಿಸಬೇಕಾಗಿದೆ. ಆದಾಗ್ಯೂ ಮಂಗಳೂರು ಉಪ ವಿಭಾಗ ಮತ್ತು ಗುಪ್ತ ವಾರ್ತಾ ಕಛೇರಿಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.